ಬಂದು ಕೂತಿದ್ದ. ಚೆನ್ನಾಗಿ ಜೇಬು ತುಂಬುಸ್ಕಳೋದು, ಸಂಜೆ ಜೂಜು, ಇಸ್ಪೀಟು, ಮಟ್ಕಾ, ಎಣ್ಣೆ, ಹೆಣ್ಣುಗಳ ವಾಸ್ನೆಯಿಂದ ಎಲ್ಲಾನೂ ಕಳ್ಕಂಡು ಬೆಳಿಗ್ಗೆ ವಸಮನ್ಸ ಆಗಿ, ಬಂದ ಹಳ್ಳಿಯವರತ್ತಿರ ಹಣ ಕೀಳೋದು. 'ನಿಮ್ಮ ಪಹಣಿ ಸರಿಯಿಲ್ಲ,' 'ಸರ್ವೇನಂಬರ್ ನಿಮ್ಮದಲ್ಲ'... ಹೀಗೇ ಏನೇನೋ ಭಯ ಹುಟ್ಟಿಸಿ ಹಳ್ಳಿಗರಿಂದ ಹಣ ಪೀಕಲು ಶುರುಮಾಡಿದ. ಅವನ ಕಾಟಕ್ಕೆ ಬಡವರೆಲ್ಲಾ ತಾಲ್ಲೂಕು ಆಫೀಸಿನ ಮೆಟ್ಲು ತುಳಿಯಕ್ಕೆ ಹೆದ್ರುಕಳ್ತಿದ್ರು. ಇದನ್ನೆಲ್ಲಾ ಅಲ್ಲಿವರೆಗೂ ನೋಡದಂತಿದ್ದ ಕಾಂತನಿಗೆ ರೇಜಿಗೆಗಿಟ್ಟುಕೊಂಡಿತು. ಹೇಳಿಕೇಳಿ ಫಣಿರಾಜ್ ತನ್ನ ಮೇಲಿನ ಅಧಿಕಾರಿ. ಕೇಳುವ ಹಾಗಿಲ್ಲ. ಸುಮ್ಮನಿರಲೂ ಆಗಲಿಲ್ಲ. ಒಮ್ಮೆ ತಿರುಗಿ ಬಿದ್ದ. 'ಈ ಹಳ್ಳಿಗರಿಂದ ಕಿತ್ತು ತಿನ್ತೀರಲ್ಲಾ ಸಾರ್. ಬಡಬಗ್ಗರನ್ನು ನೋಡಿ ಸರ್. ಹಿಂದಿನ್ದಾರಿ ಮರಿಬಾರ್ದು' ಅಂತ ಫಣಿರಾಜ್ ಹಿಂದಿನ ಜಾತಿಯನ್ನು ಜ್ಞಾಪಿಸಿ ಒಳೇಟು ನೀಡಿದ್ದ. ಇದು ಫಣಿರಾಜ್‌ಗೆ ನುಂಗಲಾರದ ತುತ್ತಾಗಿತ್ತು. ಜಾತಿಗೆ ಜಾತಿನೇ ವೈರಿ, ನೀರಿಗೆ ಪಾಚೀನೆ ವೈರಿ ಅನ್ನಂಗಾಗಿ ಅವಕಾಶ ಸಿಕ್ಕಾಗಲೆಲ್ಲಾ ಕಾಂತನ ಮೇಲೆ ಹಲ್ಲು ಮಸೆಯತೊಡಗಿದ. ಏನಾದರೂ ಮಾಡಿ ಆ ಬೋಸುಡಿಮಗನ್ನ ಸಸ್ಪೆಂಡ್ ಮಾಡ್ಬೇಕು ಎಂದು ಸಮಯ ಕಾಯುತ್ತಿದ್ದ. ಅದಕ್ಕಾಗಿ ಮಿಕವೊಂದನ್ನು ಹುಡುಕುತ್ತಿದ್ದ.

ಅಂಥ ಮಿಕವಾಗಿ ಒದಗಿ ಬಂದೋನು ಈ ರುದ್ರಮೂರ್ತಿ. ರುದ್ರಮೂರ್ತಿಗೆ ಹೇಳಿಕೇಳಿ ಕಾಂತನನ್ನು ಕಂಡರೆ ಆಗುತ್ತಿರಲಿಲ್ಲ. ಫಣಿರಾಜ್‌ನ ಕೆಳಗಡೆ ಕೆಲಸ ಮಾಡುವ ನೌಕರ. ಫಣಿರಾಜ್ ರುದ್ರಮೂರ್ತಿಯ ಸಂಗ ಮಾಡಿ ಕಾಂತನನ್ನು ಹಣಿಯಲು ಕಾಯುತ್ತಿದ್ದ. ಕಾಂತನ ವಿರುದ್ಧ ರುದ್ರಮೂತಿಯನ್ನು ಎತ್ತಿ ಕಟ್ಟಿದ. ಎದುರಿಗೆ ಬಂದರೂ ಕಣ್ಣೆತ್ತಿಯೂ ನೋಡದ ರುದ್ರಮೂರ್ತಿ ಸಮಯ ಸಿಕ್ಕಾಗಲೆಲ್ಲ ಕಾಂತನನ್ನು ಹಂಗಿಸತೊಡಗಿದ. ಒಂದಿಲ್ಲೊಂದು ವಿಷಯವನ್ನು ತಂದು ರಂಪ ಮಾಡುತ್ತಿದ್ದ. ಮೊದಮೊದಲು ಇದು ಕಾಂತನಿಗೆ ಅರ್ಥವಾಗಿರಲಿಲ್ಲ. ಇಬ್ಬರೂ ಸದಾ ವಿಷಕಾರುತ್ತಿರುವ ಸಮಯದಲ್ಲಿ ಇಲಾಖೆಯಿಂದ ಪ್ರಮೋಷನ್ ಪಟ್ಟಿ ಹೊರಬಿತ್ತು. ಅದರಲ್ಲಿ ಕಾಂತನ ಹೆಸರು ಇದ್ದದ್ದು ರುದ್ರಮೂರ್ತಿ ಹೊಟ್ಟೆಯೊಳಗೆ ಬೆಂಕಿ ಇಟ್ಟಂತಾಗಿತ್ತು. ಇನ್ನೆರಡು ತಿಂಗಳೊಳಗೆ ಕಾಂತ ಡಿ.ಟಿ.ಯಾಗಿ ಬಡ್ತಿ ಪಡೀತಾನೆ ಎಂಬ ಸುದ್ದಿ ನುಂಗಲಾರದ ತುತ್ತಾಗಿತ್ತು. ಏನಾದರೂ ಮಾಡಿ ಅದಕ್ಕೆ ಅಡ್ಡಿಪಡಿಸಲೇಬೇಕಾದ ಸ್ಥಿತಿಗೆ ಫಣಿರಾಜ್ ರುದ್ರಮೂರ್ತಿ ಇಬ್ಬರೂ ತಲುಪಿದರು. ಕಾಂತ ಮಾತ್ರ ತನ್ನ ಪಾಡಿಗೆ ತಾನು ಕೆಲಸ ಮಾಡುತ್ತ ಬಂದ ಜನರ ಹತ್ತಿರ ವಿಶ್ವಾಸದಿಂದ ಮಾತನಾಡುತ್ತ ಮುನ್ನಡೆಯುತ್ತಿದ್ದ. ಆದರೆ ಫಣಿರಾಜ್‌ನಿಗೆ ಇವ್ನು ನನ್ನ ಲೆವಲ್‌ಗೆ ಬಂದು ಬಿಡ್ತಾನೆ ಎಂಬುದು ವಿಷವಾಗಿ ಕಾಂತನ ಮೇಲೆ ರುದ್ರಮೂರ್ತಿನನ್ನು ಛೂ ಬಿಡುತ್ತಿದ್ದ. ಅಂತ ಸನ್ನಿವೇಶದಲ್ಲಿಯೇ ರುದ್ರಮೂರ್ತಿ 'ಅವು ಅಂಗೇ' ಅನ್ನೋ ಪದ ಬಳಸಿದ. ಡಿ.ಟಿ. ನನ್ನ ಜೊತೆ ಇದ್ದಾರೆ ಎಂಬ ಅಹಮ್ಮಿನಲ್ಲಿ.

ಅವತ್ತು ಮೂಡ್ನಾಪುರ ತಾಲೂಕಿನ ಕಸ್ಬ ಹೋಬ್ಳಿಯ ಕೋಡೂರು ಗ್ರಾಮದ ಮೂವತ್ಮೂರನೇ ಸರ್ವೇನಂಬರಿನ ರೆಕಾರ್ಡ್ಸ್‌ಗಾಗಿ ಎಪ್ಪತ್ತರ ವಯಸ್ಸಿನ ಈರಮ್ಮಜ್ಜಿ ತಾಲ್ಲೂಕು ಆಫೀಸಿನಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ಓಡಾಡುತ್ತಿತ್ತು. ಈರಮ್ಮಜ್ಜಿ ಜಮೀನನ್ನು ಆ ಊರಿನ ಗೌಡ ತನ್ನದೆಂದು ಈರಮ್ಮಜ್ಜಿಗೆ ಉಳುಮೆಮಾಡಲು ಬಿಟ್ಟಿರಲಿಲ್ಲ. 'ಆ ಜಾಗ್ವ ಲಪಟಾಯಿಸಿ ಲೇಔಟ್ ಮಾಡುದ್ರೆ ಒಳ್ಳೆ ಧಾರ್ಣೆ ಸಿಗ್ತದೆ. ಏನಿಲ್ಲ ಅಂದ್ರೂ ಮೂವತ್ತು ಸೈಟ್ ಆಗ್ತವೆ. ಇವ್ವಜ್ಜಿ ಸತ್ಮೇಲೆ ಯಾರ್ದಾಪಾಲಾತದೋ? ಈಗ್ಲೇ ತನ್ದು ಮಾಡ್ಕ ಬಿಡಾಣ' ಅಂತ ಡಿ.ಟಿ. ಹತ್ರ ಡೀಲ್ ಕುದುರಿಸಿದ್ದ. ಡಿ.ಟಿ.ಯೂ ಗೌಡನಿಗೂ ಹೆದರಿಸಿ 'ಅದು ಎಸ್ಸಿ ಜಮೀನು ವಶಪಡ್ಸಕಣಂಗಿಲ್ಲ' ಅಂತ ಹೇಳಿ ಅತಿ ಹೆಚ್ಚು ಹಣವನ್ನೇ ಪೀಕಿದ್ದ. ಪಿಟಿಸಿಎಲ್ ಎಂಬ ಕಾನೂನಿದ್ದರೂ ಡಿ.ಟಿ.ಯೇ ಮುಂದೆ ನಿಂತು ಆ ರೆಕಾರ್ಡ್ಸ್ ಇಲ್ದಂಗೆ ಮಾಡಕ್ಕೆ ರುದ್ರಮೂರ್ತಿಗೆ ಒಪ್ಸಿದ್ದ. ಇಂಥ ಕೇಸುಗಳಲ್ಲಿ ಪಳಗಿದ್ದ ರುದ್ರಮೂರ್ತಿ ನೀರು ಕುಡಿದಷ್ಟು ಸಲೀಸಾಗಿ ಮುಗಿಸುವ ಹಂತದಲ್ಲಿದ್ದ. ಗಂಡನಿಲ್ಲದೇ ಬದುಕು ದೂಡುತ್ತಿರುವ ಈರಮ್ಮಜ್ಜಿಗೆ, ತನ್ನ ಜಮೀನು ಗೌಡನ ಪಾಲಾಗುತ್ತಿರುವ ವಿಷಯ ಕಿವಿಗೆ ಬಿದ್ದಿತ್ತು. ಡಿ.ಟಿ. ಯವರು ಒಮ್ಮೆ ಆ ಕೋಡೂರಿಗೆ ಬಂದೋದ ಮೇಲೆ ಈ ವಿಷಯ ಈರಮ್ಮಜ್ಜಿಗೆ ಖಚಿತವಾಗಿ ದಂಗಾದಳು.

ಗಂಡ ಇರುವವರೆಗೂ ಈರಮ್ಮಜ್ಜಿಗೆ ಏನು ಸಮಸ್ಯೆಯಾಗಿರಲಿಲ್ಲ. ಅವನು ಹೇಗೋ ನಿಭಾಯಿಸುತ್ತಿದ್ದ. ಗಂಡ ಹೋದ ಮೇಲೆ ಈ ಇಳಿವಯಸ್ಸಿನಲ್ಲಿ ಪರಿಪಾಟ್ಲು ಪಡ್ತಿದ್ಲು. ವಯಸ್ಸಿಗೆ